ಕನ್ನಡಪ್ರಭ

# ಬಸವಕಲ್ಯಾಣ ಇಂಜಿನೀಯರಿಂಗ್ ಕಾಲೇಜಿಗೆ ಪ್ರಸಕ್ತ ವರ್ಷ 4 ರ್‍ಯಾಂಕ್

## ವಿದ್ಯಾರ್ಥಿಗಳ ಉತ್ತಮ ಸಾಧನೆಗೆ ತಾಳಂಪಳ್ಳಿ ಶುಭ ಹಾರೈಕೆ



ಬಸವಕಲ್ಯಾಣ ಇಂಜಿನಿಯರಿಂಗ್ ಕಾಲೇಜಿಗೆ ಪ್ರಸಕ್ತ ವರ್ಷ 4 ರ್‍ಯಾಂಕ್ ಬಂದಿದ್ದ ವಿದ್ಯಾರ್ಥಿನಿಯರಿಗೆ ಅಭಿನಂದಿಸಲಾಯಿತು.

• **ಕನ್ನಡಪ್ರಭ ವಾರ್ತೆ** ಬಸವಕಲ್ಯಾಣ

ಬೆಳಗಾವಿಯ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ಅಡಿಯಲ್ಲಿ ಜರುಗಿದ 2024-25 ನೇ ಸಾಲಿನ ಪರೀಕ್ಷೆಯಲ್ಲಿ ಬಸವಕಲ್ಯಾಣ ಇಂಜಿನೀಯರಿಂಗ್ ಕಾಲೇಜಿಗೆ ಪ್ರಸಕ್ತ ವರ್ಷ 4 ರ್‍ಯಾಂಕ್ ಬಂದಿದೆ.

ಕಂಪ್ಯೂಟರ್‌ಸೈನ್ಸ್ ವಿಭಾಗದಲ್ಲಿ2ನೇವರ್ಷದವಿದ್ಯಾರ್ಥಿನಿಯರಾದನಂದಿನಿಪ್ರಥಮ ರ್‍ಯಾಂಕ್, ಶ್ರೇಯಾ ಪತಂಗಿ ದ್ವಿತಿಯ ರ್‍ಯಾಂಕ್ ಹಾಗೂ ಸೋಮೇಶ್ವರಿ ತೃತೀಯ ರ್‍ಯಾಂಕ್ ಹಾಗೂ ಎಲೆಕ್ಟ್ರಾನಿಕ್ಸ್ ಮತ್ತು ಕಮ್ಯೂನಿಕೇಷನ್ ಇಂಜಿನೀಯರಿಂಗ್ ವಿಭಾಗದ 3 ನೇ ವರ್ಷದ ವಿದ್ಯಾರ್ಥಿನಿ ಪೀಂಕಿ ಮಂಡಲ 39ನೇ ರ್‍ಯಾಂಕ್ ಪಡೆದಿದ್ದಾರೆ.

ಬಿಇಟಿ ಸಂಸ್ಥೆಯಿಂದ ಹಮ್ಮಿಕೊಂಡಿರುವ ರ್‍ಯಾಂಕ್ ವಿದ್ಯಾರ್ಥಿಗಳ ಸನ್ಮಾನ ಸಮಾರಂಭದಲ್ಲಿ ಬಸವಕಲ್ಯಾಣ ಇಂಜಿನಿಯರಿಂಗ್ ಕಾಲೇಜಿನ ಆಡಳಿತ ಮಂಡಳಿ ಅಧ್ಯಕ್ಷರಾದ ದಿಲೀಪಕುಮಾರ ಎಸ್. ತಾಳಂಪಳ್ಳಿ ಮಾತನಾಡಿ, ಈ ಸಾಧನೆಗೆ ನಮ್ಮ ನುರಿತ ಶಿಕ್ಷಕರ ನಿರಂತರ ಪ್ರಯತ್ನ, ಪರಿಶ್ರಮದ ಫಲವಾಗಿ ಹಾಗೂ ವಿದ್ಯಾರ್ಥಿಗಳ ಕಠಿಣ ಪರಿಶ್ರಮದಿಂದಾಗಿ ನಮ್ಮ ಕಾಲೇಜಿಗೆ ಈ ವರ್ಷ 4 ರ್‍ಯಾಂಕ್ ಬಂದಿರುವುದು ನಮಗೆ ಸಂತೋಷ ತಂದಿದೆ. ರ್‍ಯಾಂಕ್ ಪಡೆದ ವಿದ್ಯಾರ್ಥಿಗಳು ಇನ್ನೂ ಹೆಚ್ಚಿನ ಸಾಧನೆ ಮಾಡಲೆಂದು ಶುಭ ಹಾರೈಸಿದರು.

ಈ ಸಾಧನೆಗೆ ಬಿಇಟಿ ಟ್ರಸ್ಟ್‌ನ ಅಧ್ಯಕರಾದ ಬಸವರಾಜ ಪಾಟೀಲ ಅಟ್ಟೂರ, ಬಸವಕಲ್ಯಾಣ ಇಂಜಿನಿಯರಿಂಗ್ ಕಾಲೇಜಿನ ಆಡಳಿತ ಮಂಡಳಿ ಸದಸ್ಯರು, ಬಿಇಟಿ ಟ್ರಸ್ಟ್ ನಿರ್ದೇಶಕರು ಹಾಗೂ ಕಾಲೇಜಿನ ಪ್ರಾಚಾರ್ಯರಾದ ಡಾ: ಅಶೋಕಕುಮಾರ ವಣಗೇರಿ, ಸಿಎಸ್ ವಿಭಾಗದ ಮುಖ್ಯಸ್ಥರಾದ ಗುರುರಾಜ ಪಟವಾರಿ ಹಾಗೂ ಇ-ಸಿಇ ವಿಭಾಗದ ಮುಖ್ಯಸ್ಥರಾದ ಡಾ.ಸಂಜೀವಕುಮಾರ ಜಲ್ದೆ ಮತ್ತು ಸಿಬ್ಬಂದ್ದಿ ವರ್ಗದವರು, ಹಾಗೂ ಎಲ್ಲಾ ವಿಭಾಗದ ಮುಖ್ಯಸ್ಥರು, ಕಾಲೇಜಿನ ಉಪಪ್ರಾಚಾರ್ಯರಾದ ಡಾ. ಅರುಣಕುಮಾರ ಎಲಾಲ, ಕುಲಸಚಿವರು ಪ್ರೇಮಸಾಗರ ಪಾಟೀಲ, ಆಡಳಿತ ಕಚೇರಿ ಅಧೀಕ್ಷರು ವೃಷಿಕೇತ ಭೂಸಾರೆ, ಪಿಆರ್‌ಒ ಶಂಕರ ಆಗರಗಿ ಹರ್ಷ ವ್ಯಕ್ತಪಡಿಸಿ ಅಭಿನಂದಿಸಿದ್ದಾರೆ.

BIDAR Edition
Aug 24, 2025 Page No. 01
Powered by: erelego.com

# ರ್‍ಯಾಂಕ ಪಡೆದ ವಿದ್ಯಾರ್ಥಿಗಳಿಗೆ ಗೌರವದ ಸನ್ಮಾನ

ವರದಿ: ವೀರಶೆಟ್ಟಿ ಮಲಶೆಟ್ಟಿ



ಭಾರತ ವೈಭವ ಸುದ್ದಿ

**ಬಸವಕಲ್ಯಾಣ:** ಇಂಜಿನೀಯರಿಂಗ ಕಾಲೇಜಿಗೆ ರ್ಯಾಂಕ ಬೆಳಗಾವಿಯ ವಿಶ್ವೇಶ್ವರಯ್ಯಾ ತಾಂತ್ರೀಕ ವಿಶ್ವವಿದ್ಯಾಲಯದ ಅಡಿಯ ಲ್ಲಿ ಜರುಗಿದ ೨೦೨೪–೨೫ ನೇ ಸಾಲಿನ ಪರೀಕ್ಷೆಯಲ್ಲಿ ಬಸವ ಕಲ್ಯಾಣ ಇಂಜಿನೀಯರಿಂಗ ಕಾಲೇಜಿನ ಕಂಪ್ಯೂಟರ ಸೈನ್ಸ ವಿಭಾಗದಲ್ಲಿ ೨ ನೇ ವರ್ಷದ ವಿದ್ಯಾರ್ಥಿನಿಯರಾದ ಕು. ನಂದಿನಿ ಪ್ರಥಮ ರ್ಯಾಂಕ್, ಕು. ಶ್ರೇಯಾ ಪತಂಗಿ ದ್ವಿತಿಯ ರ್ಯಾಂಕ್ ಹಾಗೂ ಕು. ಸೋಮೇಶ್ವರಿ ತೃತೀಯ ರ್ಯಾಂಕ್ ಹಾಗೂ ಎಲೆಕ್ಟ್ರೊನಿಕ್ಸ್ ಮತ್ತು ಕಮ್ಯೂನೀಕೆಶನ್ ಇಂಜಿನೀಯರಿಂಗ್ ವಿಭಾಗದ ೩ ನೇ ವರ್ಷದ ವಿದ್ಯಾರ್ಥಿನಿ ಕುಮಾರಿ ಪೀಂಕಿ ಮಂಡಲ ೩೯ ನೇ ರ್ಯಾಂಕ್ ಪಡೆದಿದ್ದಾರೆ.

ಸಾಧನೆಗೈದ ವಿದ್ಯಾರ್ಥಿಗಳಿಗೆ ಕಾಲೇಜಿನ ಆಡಳಿತ ಮಂಡಳಿಯ ವತಿಯಿಂದ ಬಿಇಟಿ ಟ್ರಸ್ಟ್ ನ ಉಪಾಧ್ಯಕ್ಷರು ಹಾಗೂ ಬಸವ ಕಲ್ಯಾಣ ಇಂಜಿನಿಯರಿಂಗ್ ಕಾಲೇಜಿನ ಆಡಳಿತ ಮಂಡಳಿ ಅಧ್ಯಕ್ಷರು ದಿಲೀಪಕುಮಾರ ಎಸ್. ತಾಳಂಪಳ್ಳಿಯವರು, ಪ್ರಾಂಶುಪಾಲರು, ಕುಲಸಚಿವರು, ಎಲ್ಲಾ ವಿಭಾಗದ ಮುಖ್ಯಸ್ಥ ರು, ಎಲ್ಲಾ ಸಿಬ್ಬಂಧ್ದಿ ವರ್ಗ ಹಾಗೂ ವಿದ್ಯಾರ್ಥಿಗಳ ಸಮ್ಮುಖ ದಲ್ಲಿ ಸನ್ಮಾನ ಮಾಡಿ ಹರ್ಷವ್ಯಕ್ತಪಡಿಸಿ ಅಭಿನಂದಿಸಿದರು.

ಈ ಸಂಧರ್ಭದಲ್ಲಿ ಬಸವಕಲ್ಯಾಣ ಇಂಜಿನಿಯರಿಂಗ ಕಾಲೇಜಿನ ಆಡಳಿತ ಮಂಡಳಿ ಅಧ್ಯಕ್ಷರ ದಿಲೀಪಕುಮಾರ ಎಸ, ತಾಳಂಪಳ್ಳಿ ಯವರು ಮಾತನಾಡುತ್ತಾ, ಈ ಒಂದು ಸಾಧನೆಗೆ ನಮ್ಮ ನುರಿತ ಶಿಕ್ಷಕರ ನಿರಂತರ ಪ್ರಯತ್ನ ಪರಿಶ್ರಮದ ಫಲವಾಗಿ ಹಾಗೂ ವಿದ್ಯಾರ್ಥಿಗಳ ಕಠಿಣ ಪರಿಶ್ರಮದಿಂದಾಗಿ ಹಾಗೂ ಶ್ರದ್ಧೆಯಿಂದ ಅಭ್ಯಾಸ ಮಾಡಿ, ನಮ್ಮ ಕಾಲೇಜಿನ ವತಿಯಿಂದ ನೀಡುತ್ತಿರುವ ಅತ್ಯುತ್ತಮ ಸೌಲಭ್ಯಗಳನ್ನು, ಉಪಯೋಗಿಸಿಕೊಳ್ಳುತ್ತಾ ನಮ್ಮ ಕಾಲೇಜಿಗೆ ರ್ಯಾಂಕ್ ಬರುತ್ತಿರುವುದು ಹಾಗೂ ನಮ್ಮ ಸಂಸ್ಥೆಗೆ ಹೆಮ್ಮೆ ತಂದು ಕೊಟ್ಟಿರುವುದು ಸಂತೋಷದ ವಿಷಯವಾಗಿದೆ ಎಂದು ಹೇಳಿದರು.

ಈ ಸಾಧನೆಗೆ ಬಿಇಟಿ ಟ್ರಸ್ಟ್ ನ ಅಧ್ಯಕರು ಬಸವರಾಜ ಪಾಟೀಲ ಅಟ್ಟೂರ, ಬಸವಕಲ್ಯಾಣ ಇಂಜಿನಿಯರಿಂಗ್ ಕಾಲೇಜಿನ ಆಡಳಿತ ಮಂಡಳಿ ಸದಸ್ಯರು, ಬಿಇಟಿ ಟ್ರಸ್ಟ್ನ ನಿರ್ದೇಶಕರು ಹಾಗೂ ಕಾಲೇಜಿನ ಪ್ರಾಚಾರ್ಯರಾದ ಡಾ: ಅಶೋಕಕುಮಾರ ವಣ ಗೇರಿ, ಸಿಎಸ್ ವಿಭಾಗದ ಮುಖ್ಯಸ್ಥರಾದ ಗುರುರಾಜ ಪಟವಾರಿ ಹಾಗೂ ಇ&ಸಿಇ ವಿಭಾಗದ ಮುಖ್ಯಸ್ಥರ ಡಾ: ಸಂಜಿವಕುಮಾರ ಜಲ್ದೆ ಮತ್ತು ಸಿಬ್ಬಂದ್ದಿ ವರ್ಗದವರು, ಹಾಗೂ ಎಲ್ಲಾ ವಿಭಾಗದ ಮುಖ್ಯಸ್ಥರು, ಕಾಲೇಜಿನ ಉಪ ಪ್ರಾಚಾರ್ಯರಾದ ಡಾ: ಅರುಣ ಕುಮಾರ ಎಲಾಲ, ಕುಲಸಚಿವರು ಪ್ರೇಮಸಾಗರ ಪಾಟೀಲ, ಆಡಳಿತ ಕಚೇರಿ ಅಧೀಕ್ಷರು ವೃಷಿಕೇತ ಭೂಸಾರೆ, ಪಿಆರ್‌ಓ ಶಂಕರ ಆಗರಗಿಯವರು ಹರ್ಷ ವ್ಯಕ್ತಪಡಿಸಿ,ಅಭಿನಂದಿಸಿದ್ದಾರೆ.